ರಾಣಿಬೆನ್ನೂರಿನ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿಯನ್ನು ಸ್ಥಳಾಂತರಿಸುವ ಬಗ್ಗೆ.

3593 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಂಗ್ಗಾವ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ರಾಣಿ ಬೆನ್ನೂರಿನಿಂದ (ಎಸ್‌ಸಿ) ಟಿಆರ್‌ಐಪಿ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಆಫೀಸ್ ಅನ್ನು ಸವಣೂರಿಗೆ ಶಿಪ್ಟ್ ಮಾಡಲು ಸರ್ಕಾರದಿಂದ ಆದೇಶವಾಗಿದೆಯೇ ಹಾಗಿದ್ದಲ್ಲಿ ಕಛೇರಿಯನ್ನು ಈವರೆಗೂ ಸ್ಥಳಾಂತರಿಸದಿರಲು ಕಾರಣವೇನು?

ಆ) ಸದರಿ ಕಛೇರಿಯಲ್ಲಿ ಎಷ್ಟು ಜನ ಸಿಬ್ಬಂದಿ ವರ್ಗದವರು ಕೆಲಸ ಮಾಡುತ್ತಾರೆ.

ಇ) ಶಿಗ್ಗಾಂವ, ಸವಣೂರು ತಾಲ್ಲೂಕುಗಳಲ್ಲಿ ಎಷ್ಟು ಹೆಕ್ಟೇರು ಜಮೀನು ಎಷ್ಟು ಹಣವನ್ನು 1989-90, 1990-91,1991-92ರಲ್ಲಿ ಖರ್ಚು ಮಾಡಲಾಗಿದೆ.

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು) :

ಅ) ಸಹಾಯಕ ಕೃಷಿ ನಿರ್ದೇಶಕರು (ಬೂನಾಸಂ) ಟಿಆರ್‌ಎಪಿ, ರಾಣಿ ಬೆನ್ನೂರು ಇವರ ಕಛೇರಿಯನ್ನು ಧಾರವಾಡ ಜಿಲ್ಲೆಯ ಸವಣೂರಿಗೆ ಸ್ಥಳಾಂತರಿಸಲು ದಿನಾಂಕ 30-7-91ರಂದು ಸರ್ಕಾರದ ಆದೇಶವಾಗಿರುತ್ತದೆ. ಸವಣೂರಿನಲ್ಲಿ ಸದರಿ ಕಛೇರಿಯನ್ನು ಪ್ರಾರಂಭಿಸಲು ಸರ್ಕಾರಿ ಕಟ್ಟಡಗಳು ಸಿಗದೆ, ಹಾಗೂ ಖಾಸಗಿ ಕಟ್ಟಡಗಳು ಬಾಡಿಗೆಗೆ ಲಭ್ಯವಾಗದ ಪ್ರಯುಕ್ತ ಸ್ಥಳಾಂತರವು ಇದುವರೆಗೂ ಸಾಧ್ಯವಾಗಿಲ್ಲ.

ಸವಣೂರಿನಲ್ಲಿ ಸೂಕ್ತ ಕಟ್ಟಡ ಸಿಕ್ಕಿದ ತಕ್ಷಣ ಸಹಾಯಕ ಕೃಷಿ ನಿರ್ದೇಶಕರು (ಬೂನಾಸಂ) ಟಿಆರ್‌ಎಪಿ ರಾಣಿ ಬೆನ್ನೂರು ಇವರ ಕಾರ್ಯಾಲಯವನ್ನು ಸವಣೂರು ಕೇಂದ್ರ ಸ್ಥಾನಕ್ಕೆ ಸ್ಥಳಾಂತರಿಸಲಾಗುವುದು.

ಆ) ಒಟ್ಟು 477 ಜನ.

ಇ) ಶಿಗ್ಗಾಂವ ಹಾಗೂ ಸವಣೂರು ತಾಲ್ಲೂಕುಗಳಲ್ಲಿ ಕೇಂದ್ರ ಪುರಸ್ಕೃತ ನದೀ ಕಣಿವೆ ಯೋಜನೆಯಡಿಯಲ್ಲಿ ಭೂಸಂರಕ್ಷಣೆ ಹಾಗೂ ಭೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದೆ. ವಿವರಗಳು ಈ ಕೆಳಕಂಡಂತೆ ಇವೆ:

<u>ಶಿಗ್ಗಾಂವ ತಾಲ್ಲೂಕು</u> :

ವರ್ಷ	ಅಭಿವೃದ್ಧಿ ಪಡಿಸಿದ ಜಮೀನು(ಹೆಕ್ಟೇರುಗಳಲ್ಲಿ)	ವಿನಿಯೋಗಿಸಿದ ಹಣ (ಲಕ್ಷ ರೂ. ಗಳಲ್ಲಿ)
1989-90	231	2.51
1990-91	217	2.71
1991-92 (ಆಗಸ್ಟ್ ಕೊನೆಯವರೆಗೆ)	04	0.26
<u>ಸವಣೂರು ತಾಲ್ಲೂಕು</u>		
1989-90	1224	10.62
1990-91	2638	24.95
1991-92 (ಆಗಸ್ಟ್ ಕೊನೆಯವರೆಗೆ)	1045	11.95